ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

ಸೆಷನ್ಸ್ ಕೇಸ್ ನಂಬ್ರ **76/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಘು ಕೆ | ಪ್ರಾ.ಸಾಃ 3 |
| ತಂದೆಯ ಹೆಸರು | : | ರಾಮಾ. ಎಮ | ಚಾ.ಸಾಃ 8 |
| ಪ್ರಾಯ | : | 48 ವರ್ಷ | **ದಿನಾಂಕಃ 13.11.2024** |
| ಉದ್ಯೋಗ | : | ಟ್ಯಾಕ್ಸಿ ಚಾಲಕ | ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ವಾಸಸ್ಥಳ | : | ಎಕ್ಕಾರು, ತೆಂಕೆ ಎಕ್ಕಾರು ಗ್ರಾಮ | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ಚಾ.ಸಾ.2, ಚಾ.ಸಾ.3, ಚಾ.ಸಾ.5 ಚಾ.ಸಾ.6 ಮತ್ತು ಚಾ.ಸಾ.9 ರಿಂದ ಚಾ.ಸಾ.12 ರವರ ಪರಿಚಯ ಇದ್ದು ಅವರು ನಮ್ಮ ಊರಿನವರು ಮತ್ತು ನೆರೆಕೆರೆಯವರು. ನ್ಯಾಯಾಲಯದ ಮುಂದೆ ಇರುವ ಆರೋಪಿ ನೋಡಿ ಸಾಕ್ಷಿ ಗುರುತಿಸುತ್ತಾರೆ. ಈ ಪ್ರಕರಣದ ಮೃತ ಸರಿತಾ ಅವರ ಪರಿಚಯ ಇದೆ, ಅವರು ಆರೋಪಿಯ ಹೆಂಡತಿ. ಚಾ.ಸಾ.4 ರಾಹುಲ್ ಆರೋಪಿ ಹಾಗೂ ಮೃತ ಸರಿತಾಳ ಮಗ .

2. ಆರೋಪಿ ಮತ್ತು ಮೃತ ಸರಿತಾ ಮತ್ತು ಚಾ.ಸಾ.4, ಚಾ.ಸಾ.12 ರವರಿಗೆ ಸೇರಿದ ತೆಂಕೆ ಎಕ್ಕಾರು ಗ್ರಾಮಾದ ಪಲ್ಲದ ಕೋಡಿಯಲ್ಲಿಯ ಜಾಗದಲ್ಲಿ ಇದ್ದ ಶೆಡ್ಡನಲ್ಲಿ ವಾಸವಾಗಿದ್ದರು. ದಿನಾಂಕಃ 28.11.2022 ರಂದು ನಾನು ಬೆಳಿಗ್ಗೆ ಕೆಲಸಕ್ಕೆ ಹೋಗುವಾಗ, ಅಲ್ಲಿ ಜನರು ಆರೋಪಿ ಹೆಂಡತಿ ಕೋಲೆ ಆಗಿದೆ ಎಂದು ಮಾತನಾಡುತ್ತಿದ್ದರು, ಆಗ ನಾನು ಆರೋಪಿ ಮನೆಗೆ ಹೋದೆ. ಒಳಗೆ ಹೋಗಿ

ನೋಡಲಾಗಿ ಅದು ಸರಿತಾಳ ಮೃತದೇಹ ಅಂಗಾತ ಮಲಗಿದ್ದು ಮೈಮೇಲೆ ಚೂಡಿಧಾರ ಪ್ಯಾಂಟ್ ಮಾತ್ರ ಇತ್ತು. ಆಕೆಯ ಮೈಮೇಲೆ ರಕ್ತ ಗಾಯ ಇತ್ತು, ಎಡಗಡೆ ಕಣ್ಣಿಣ ಹತ್ತಿರ ಗಾಯ ಇತ್ತು. ಅಲ್ಲೇ ಇದ್ದ ಚಾ.ಸಾ.2 ಮತ್ತು ಚಾ.ಸಾ.3 ರವರನ್ನು ವಿಚಾರಿಸಲಾಗಿ ಅವರು ಹೇಳಿದ್ದು ಏನೆಂದರೇ, ಹಿಂದಿನ ದಿನಾಂಕಃ 27.11.2022 ರಂದು ಆರೋಪಿ ಕುಡಿದು ಬಂದು ರಾತ್ರಿ 8.30 ಕ್ಕೆ ಆರೋಪಿ ಸರಿತಾಳೊಂದಿಗೆ ಜಗಳ ಮಾಡಿ ಹೋಡೆದಿರುತ್ತಾರೆ. ನಂತರ ಚಾ.ಸಾ.2 ಮತ್ತು ಚಾ.ಸಾ.3 ರವರು ಇವರ ಜಗಳವನ್ನು ಬಿಡಿಸಿ, ಸಮಾಧಾನ ಮಾಡಿ ಆಕೆಗೆ ಗಾಯವಾದ ಕಾರಣ ಚಿಕಿತ್ಸೆ ಕೊಡಿಸಲು ಹೇಳಿರುತ್ತಾರೆ. ನಂತರ ಬೆಳಿಗ್ಗೆ ಹೋಗಿ ನೋಡಿದಾಗ ಘಟಣೆ ಆಗಿದೆ ಎಂದು ತಿಳಿಸಿದರು.

3. ನಂತರ ಸ್ಥಳಕ್ಕೆ ಬಜಪೆ ಪೊಲೀಸು ಠಾಣೆಯ ಇನ್ಸ್‌ಪೆಕ್ಟರ ಮತ್ತು ಸಿಬ್ಬಂಧಿ ಬಂದಿರುತ್ತಾರೆ. ಸ್ಥಳದಲ್ಲಿದ್ದ ಮೃತಳ ಸಹೋದರ ಸಂತೋಷ ಪೊಲೀಸರಿಗೆ ದೂರು ನೀಡಿರುತ್ತಾರೆ. ಮೃತದೇಹವನ್ನು ಆಸ್ಪತ್ರೆಗೆ ತೆಗೆದುಕೊಂಡ ಹೋದ ಬಳಿಕ, ನಾನು ನನ್ನ ಕೆಲಸಕ್ಕೆ ಬಜಪೆ ಗೆ ಹೋದೆ. ನಂತರ 12.30 ಸಮಯಕ್ಕೆ ನಾನು ನನ್ನ ಮನೆಗೆ ಹೋಗಿರುತ್ತೇನೆ. ಮಧ್ಯಾಹ್ನ 1.15 ಕ್ಕೆ ಸುಮಾರಿಗೆ ಘಟನಾ ಸ್ಥಳಕ್ಕೆ ಪೊಲೀಸರು ಬಂದಿರುತ್ತಾರೆ ಎಂದು ತಿಳಿದು ನಾನು ಘಟನಾ ಸ್ಥಳಕ್ಕೆ ಹೋದೆ. ಅಲ್ಲಿ ಬಜಪೆ ಪೊಲೀಸ ನಿರೀಕ್ಷಕ ಮತ್ತು ಸಿಬ್ಬಂಧಿ ಇದ್ದರು. ಅಲ್ಲಿ ಚಾ.ಸಾ.9 ರವರು ಬಂದಿದ್ದರು. ಅಲ್ಲಿ ಸ್ಥಳ ಮಹಜರು ತಯಾರಿಸುವ ಸಮಯ, ನನಗೆ ಮಹಜರಿಗೆ ಸಹಿ ಹಾಕಬೇಕು ಎಂದು ಹೇಳಿದ್ದರು.

4. ಸದ್ರಿ ಶೆಡ್ಡಿನಿಂದ 10 ಅಡಿ ದೂರದಲ್ಲಿ 2 ಹಲಗೆ ಮತ್ತು ಒಂದು ರೀಪಿನ

ತುಂಡು ಇತ್ತು, ಅದಕ್ಕೆ ರಕ್ತ ತಾಗಿತ್ತು. ಸದ್ರಿ ಹಲಗೆ ಒಂದು 32 ಇಂಚು ಉದ್ದ ಮತ್ತು 9 ಇಂಚು ಅಗಲ ಇತ್ತು, ಇನ್ನೊಂದು ಹಲಗೆ 30 ಇಂಚು ಉದ್ದ ಮತ್ತು 8 ಇಂಚು ಅಗಲ ಇತ್ತು ಹಾಗೂ ರೀಪು 22 ಇಂಚು ಉದ್ದ 2 ಇಂಚು ಅಗಲ ಇತ್ತು. ಸದ್ರಿ 3 ವಸ್ತುಗಳನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಪ್ಯಾಕ ಮಾಡಿ ಸೀಲ್ ಹಾಕಿ ನಾನು ಮತ್ತು ಚಾ.ಸಾ.9 ರವರ ಸಹಿ ಇರುವ ಚೀಟಿಯನ್ನು ಅಂಟಿಸಿ ಅದಕ್ಕೆ 1 ರಿಂದ 3 ಅಂತ ಗುರುತು ಹಾಕಿರುತ್ತಾರೆ. ನಂತರ ಅದರ ಪಕ್ಕದಲ್ಲಿ ಹಂಚಿನ ಚೂರು ಇತ್ತು, ಅದರಲ್ಲೂ ಸಹ ರಕ್ತದ ಕಲೆ ಇತ್ತು. ಅಲ್ಲ ಗಿಡಗಂಟೆಗಳಲ್ಲಿ ರಕ್ತದ ಕಲೆ ಇತ್ತು. ಅವುಗಳ ಪೈಕಿ 9 ಗಿಡಗಂಟೆಗಳನ್ನು ಸುಮಾರು ಒಂದು ಅಡಿ ಉದ್ದದ್ದೂ, ತುಂಡು ಮಾಡಿ ಬಿಳಿ ಬಟ್ಟೆಯಲ್ಲಿ ಹಾಕಿ ಪ್ಯಾಕ ಮಾಡಿ ಸೀಲ್ ಹಾಕಿ ನಾನು ಮತ್ತು ಚಾ.ಸಾ.9 ರವರ ಸಹಿ ಇರುವ ಚೀಟಿಯನ್ನು ಅಂಟಿಸಿ ಅದಕ್ಕೆ 4 ಮತ್ತು 5 ಅಂತ ಕ್ರಮವಾಗಿ ಗುರುತು ಹಾಕಿರುತ್ತಾರೆ. ನಂತರ ಅಲ್ಲಿ ಇದ್ದ ರಕ್ತ ಮಿಶ್ರಿತ ಮಣ್ಣು ಮತ್ತು ರಕ್ತ ಇಲ್ಲದ ಮಣ್ಣನ್ನು, ಪ್ರತ್ಯೇಕ ಡಬ್ಬಕ್ಕೆ ಹಾಕಿ ಬಿಳಿ ಬಟ್ಟೆಯಲ್ಲಿ ಹಾಕಿ ಪ್ಯಾಕ ಮಾಡಿ ಸೀಲ್ ಹಾಕಿ ನಾನು ಮತ್ತು ಚಾ.ಸಾ.9 ರವರ ಸಹಿ ಇರುವ ಚೀಟಿಯನ್ನು ಅಂಟಿಸಿ ಅದಕ್ಕೆ 6 ಮತ್ತು 7 ಅಂತ ಕ್ರಮವಾಗಿ ಗುರುತು ಹಾಕಿರುತ್ತಾರೆ. ನಂತರ ಶೆಡ್ಡಿನ ಒಳಗೆ ಮೃತ ಸರಿತಾಳ ಚೂಡಿದಾರ ಟಾಪ್ ಇತ್ತು, ಅದು ಕೆಂಪು ಬಣ್ಣದು ಅದಕ್ಕೂ ಸಹ ರಕ್ತದ ಕಲೆ ಆಗಿತ್ತು. ಅದನ್ನು ಪ್ಲಸ್ಟಿಕ ಕೊಟ್ಟೆಯಲ್ಲಿ ಹಾಕಿ ಬಿಳಿ ಬಟ್ಟೆಯಲ್ಲಿ ಹಾಕಿ ಪ್ಯಾಕ ಮಾಡಿ ಸೀಲ್ ಹಾಕಿ ನಾನು ಮತ್ತು ಚಾ.ಸಾ.9 ರವರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ. ಅಲ್ಲಿ ಮಧ್ಯಾಹ್ನ 1.15 ರಿಂದ 3.00 ಗಂಟೆಯ ತನಕ ಮಹಜರು ಬಂದು ನನ್ನ ಸಹಿ ಪಡೆದಿರುತ್ತಾರೆ. ಈಗ ಸದರಿ ಮಹಜರು ನೋಡುತ್ತಿದ್ದು ಅದನು ನಿ.ಪಿ.2 ಅಂತ ಗುರುತಿಸಲಾಯಿತು ಮತ್ತು ಸದ್ರಿ ಮಹಜರನ 2, 4, ಮತ್ತು 5ನೇ ಪುಟದಲ್ಲಿರುವ ಸಾಕ್ಷಿ

ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ, 5ನೇ ಪುಟದಲ್ಲಿರುವ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

5. ಆ ಸಮಯದಲ್ಲಿ ಸ್ಥಳದಲ್ಲಿ ಫೋಟೋಗಳನ್ನು ತೆಗೆದಿರುತ್ತಾರೆ. ಸದ್ರಿ ಫೋಟೋ ಈ ನೋಡುತ್ತಿದ್ದು ಅದನ್ನು ನಿ.ಪಿ.3 ಎಂದು ಗುರುತಿಸಲಾಯಿತು. ಸದ್ರಿ ಫೋಟೋದಲ್ಲಿ ಸಾಕ್ಷಿ ತನ್ನ ಇರುವಿಕೆಯನ್ನು ಗುರುತಿಸಲಾಯಿತು.

6. ಅದೇ ದಿನ ಸಂಜೆ 6.15 ಕ್ಕೆ ಪೊಲೀಸು ನೀರೀಕ್ಷಕರು ನನ್ನನ್ನು ಮತ್ತು ಚಾ.ಸಾ.9 ರವರನ್ನು ಬಜಪೆ ಪೊಲೀಸು ಠಾಣೆಯ ನೀರೀಕ್ಷಕರು ಕೊಠಡಿಗೆ ಕರೆಸಿ, ಆ ಸಮಯ ಒಬ್ಬರು ಮಹಿಳಾ ಪೊಲೀಸು ಸಿಬ್ಬಂಧಿಯವರು ಮೃತ ಸರಿತಾಳ ಚೂಡಿದಾರ ಪ್ಯಾಂಟ್ ಮತ್ತು ಒಂದು ಬೆಡ್ ಶೀಟ್ನ್ ಆಸ್ಪತ್ರೆಯಿಂದ ತಂದು ಹಾಜರು ಪಡಿಸಿರುತ್ತಾರೆ. ಸದ್ರಿ ಚೂಡಿದಾರ ಪ್ಯಾಂಟ ಹಳದಿ ಬಣ್ಣದ್ದಿತ್ತು ಮತ್ತು ಬೆಡ್ ಶೀಟ ಕೆಂಪು ಮತ್ತು ಕಪ್ಪು ಬಣ್ಣದ್ದಿತ್ತು. ಸದ್ರಿ ವಸ್ತುಗಳುನ್ನು ಒಂದು ಪ್ಲಾಸ್ಟಿಕ ಕವರ್ನಲ್ಲಿ ಹಾಕಿ, ಬಿಳಿ ಬಟ್ಟೆಯಲ್ಲಿ ಹಾಕಿ ಪ್ಯಾಕ ಮಾಡಿ ಸೀಲ್ ಹಾಕಿ ನಾನು ಮತ್ತು ಚಾ.ಸಾ.9 ರವರ ಸಹಿ ಇರುವ ಚೀಟಿಯನ್ನು ಅಂಟಿಸಿ ಅದಕ್ಕೆ 8 ಮತ್ತು 9 ಅಂತ ಕ್ರಮವಾಗಿ ಗುರುತು ಹಾಕಿರುತ್ತಾರೆ. ಅಲ್ಲಿ ಸಂಜೆ 6.15 ರಿಂದ 7.30 ರವರೆಗೆ ಮಹಜರು ತಯಾರಿಸಿ ನನ್ನ ಸಹಿ ಪಡೆದಿರುತ್ತಾರೆ. ಈಗ ಸದರಿ ಮಹಜರು ನೋಡುತ್ತಿದ್ದು ಅದನು ನಿ.ಪಿ.4 ಅಂತ ಗುರುತಿಸಲಾಯಿತು ಮತ್ತು ಅದರಲ್ಲರುವ ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ, ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆ ದಿವಸ ವಶಕ್ಕೆ ಪಡೆದ ವಸ್ತುಗಳನ್ನು

ನೋಡಿದರೆ ಗುರುತಿಸಬಲ್ಲೆ.

7.ಈಗ ಸೀಲ್ ಮಾಡಲಾದ ಬಿಳಿ ಬಟ್ಟೆಯಿಂದ ಸುತ್ತಿದ ಪ್ಯಾಕೆಟನ್ನು ತೆರೆಯಲು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ ಮೇರೆಗೆ ಅವಕಾಶ ಕಲ್ಪಿಸಲಾಗಿ, ಸದರಿ ಬಿಳಿ ಬಟ್ಟೆಯಲ್ಲಿ ಇರುವ ಒಂದು ಹಲಗೆಯನ್ನು ಮು.ಮಾ.**1** ಎಂದು ಗುರುತಿಸಲಾಯಿತು.

8. ಈಗ ಸೀಲ್ ಮಾಡಲಾದ ಬಿಳಿ ಬಟ್ಟೆಯಿಂದ ಸುತ್ತಿದ ಪ್ಯಾಕೆಟನ್ನು ತೆರೆಯಲು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ ಮೇರೆಗೆ ಅವಕಾಶ ಕಲ್ಪಿಸಲಾಗಿ, ಸದರಿ ಬಿಳಿ ಬಟ್ಟೆಯಲ್ಲಿ ಇರುವ ಇನ್ನೊಂದು ಹಲಗೆ ಮು.ಮಾ.**2** ಎಂದು ಗುರುತಿಸಲಾಯಿತು.

9. ಈಗ ಸೀಲ್ ಮಾಡಲಾದ ಬಿಳಿ ಬಟ್ಟೆಯಿಂದ ಸುತ್ತಿದ ಪ್ಯಾಕೆಟನ್ನು ತೆರೆಯಲು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ ಮೇರೆಗೆ ಅವಕಾಶ ಕಲ್ಲಿಸಲಾಗಿ, ಸದರಿ ಬಿಳಿ ಬಟ್ಟೆಯಲ್ಲಿ ಇರುವ ಮರದ ರೀಪು ನು ಮು.ಮಾ.**3** ಎಂದು ಗುರುತಿಸಲಾಯಿತು.

10 .ಈಗ ಸೀಲ್ ಮಾಡಲಾದ ಬಿಳಿ ಬಟ್ಟೆಯಿಂದ ಸುತ್ತಿದ ಪ್ಯಾಕೆಟನ್ನು ತೆರೆಯಲು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ ಮೇರೆಗೆ ಅವಕಾಶ ಕಲ್ಪಿಸಲಾಗಿ, ಸದರಿ ಬಿಳಿ ಬಟ್ಟೆಯಲ್ಲಿ ಇರುವ ಗಿಡಗಂಟಿಗಳ ತುಂಡುಗಳನ್ನು ಒಟ್ಟಾಗಿ ಮು.ಮಾ.**4** ಎಂದು ಗುರುತಿಸಲಾಯಿತು.

11. ಈಗ ಸೀಲ್ ಮಾಡಲಾದ ಬಿಳಿ ಬಟ್ಟೆಯಿಂದ ಸುತ್ತಿದ ಪ್ಯಾಕೆಟನ್ನು ತೆರೆಯಲು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ ಮೇರೆಗೆ ಅವಕಾಶ ಕಲ್ಪಿಸಲಾಗಿ, ಸದರಿ ಬಿಳಿ ಬಟ್ಟೆಯಲ್ಲಿ ಇರುವ ಹಂಚಿನ ತುಂಡುಗಳು ಒಟ್ಟಾಗಿ ಮು.ಮಾ.**5** ಎಂದು

ಗುರುತಿಸಲಾಯಿತು.

12. ಈಗ ಸೀಲ್ ಮಾಡಲಾದ ಬಿಳಿ ಬಟ್ಟೆಯಿಂದ ಸುತ್ತಿದ ಪ್ಯಾಕೆಟನ್ನು ತೆರೆಯಲು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ ಮೇರೆಗೆ ಅವಕಾಶ ಕಲ್ಪಿಸಲಾಗಿ, ಸದರಿ ಬಿಳಿ ಬಟ್ಟೆಯಲ್ಲಿ ಇರುವ ರಕ್ತ ಮಿಶ್ರಿತ ಮಣ್ಣು ಇರುವ ಪ್ಲಾಸ್ಟಿಕ ಡಬ್ಬಿ ಮು.ಮಾ.**6** ಎಂದು ಗುರುತಿಸಲಾಯಿತು.

13. ಈಗ ಸೀಲ್ ಮಾಡಲಾದ ಬಿಳಿ ಬಟ್ಟೆಯಿಂದ ಸುತ್ತಿದ ಪ್ಯಾಕೆಟನ್ನು ತೆರೆಯಲು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ ಮೇರೆಗೆ ಅವಕಾಶ ಕಲ್ಪಿಸಲಾಗಿ, ಸದರಿ ಬಿಳಿ ಬಟ್ಟೆಯಲ್ಲಿ ಇರುವ ರಕ್ತ ಇರದ ಮಣ್ಣು ಇರುವ ಪ್ಲಾಸ್ಟಿಕ ಡಬ್ಬಿ ಮು.ಮಾ.**7** ಎಂದು ಗುರುತಿಸಲಾಯಿತು.

14. ಈಗ ಸೀಲ್ ಮಾಡಲಾದ ಬಿಳಿ ಬಟ್ಟೆಯಿಂದ ಸುತ್ತಿದ ಪ್ಯಾಕೆಟನ್ನು ತೆರೆಯಲು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ ಮೇರೆಗೆ ಅವಕಾಶ ಕಲ್ಪಿಸಲಾಗಿ, ಸದರಿ ಬಿಳಿ ಬಟ್ಟೆಯಲ್ಲಿ ಇರುವ ಚೂಡಿದಾರ ಟಾಪ್ ಮು.ಮಾ.**8** ಎಂದು ಗುರುತಿಸಲಾಯಿತು.

15. ಈಗ ಸೀಲ್ ಮಾಡಲಾದ ಬಿಳಿ ಬಟ್ಟೆಯಿಂದ ಸುತ್ತಿದ ಪ್ಯಾಕೆಟನ್ನು ತೆರೆಯಲು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ ಮೇರೆಗೆ ಅವಕಾಶ ಕಲ್ಪಿಸಲಾಗಿ, ಸದರಿ ಬಿಳಿ ಬಟ್ಟೆಯಲ್ಲಿ ಇರುವ ಹಳದಿ ಬಣ್ಣದ ಲೆಗಿನ್ ಮು.ಮಾ.**9** ಎಂದು ಗುರುತಿಸಲಾಯಿತು.

16. ಈಗ ಸೀಲ್ ಮಾಡಲಾದ ಬಿಳಿ ಬಟ್ಟೆಯಿಂದ ಸುತ್ತಿದ ಪ್ಯಾಕೆಟನ್ನು ತೆರೆಯಲು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ ಮೇರೆಗೆ ಅವಕಾಶ ಕಲ್ಪಿಸಲಾಗಿ, ಸದರಿ ಬಿಳಿ ಬಟ್ಟೆಯಲ್ಲಿ ಇರುವ ಬೆಡ್ ಶೀಟ್ ಮು.ಮಾ.10 ಎಂದು ಗುರುತಿಸಲಾಯಿತು.

17. ಆ ರೀತಿ ಮು.ಮಾ.1 ರಿಂದ ಮು.ಮೂ.10 ರ ಚೀಟಿಯಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ ಮೇರೆಗೆ, ಸದರಿ ಸಹಿಗಳನ್ನು ಮು.ಮಾ.1(ಎ) ದಿಂದ ಮು.ಮಾ.10(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವಕೀಲರಾದ ಶ್ರೀ ಜಿ.ವಿ.ಜಿ. ವಕೀಲರಿಂದಃ</u>-

18. ನಾನು ಎಕ್ಕಾರು ಗ್ರಾಮ ಪಂಚಾಯತನ ಅಧ್ಯಕ್ಷನಾಗಿ 2.5 ವರ್ಷ ಇದ್ದೆ ಎಂದರೆ ಸರಿ. ಪಂಚಾಯತಿ ಎಲೆಕ್ಷನ ಕಾಲಕ್ಕೆ, ನಾನು ಮತ್ತು ಆರೋಪಿ ಬೇರೆ ಬೇರೆ ಪಾರ್ಟಿಯಲ್ಲಿ ಕೆಲಸ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೆ ಸ್ವಂತ ಮನೆ ಇಲ್ಲ ಎಂದರೆ ಸರಿಯಲ್ಲ. ಆರೋಪಿ ವಾಸ ಮಾಡುತ್ತಿದ್ದ ಶೆಡ್ಡಿನಿಂದ ಸ್ವಲ್ಪ ಹತ್ತಿರದಲ್ಲಿ ಸಂತ ಮನೆ ಇದೆ. ಅಂದರೆ ಆರೋಪ ವಾಸ ಮಾಡುತ್ತಿದ್ದ ಶೆಡ್ಡಿನಿಂದ 1500 ಮೀಟರ ದೂರದಲ್ಲಿ ಆತನ ತಂದೆ ತಾಯಿಯ ಮನೆ ಇದೆ. ಆರೋಪಿ ಶೆಡ್ಡ ಅಕ್ಕಪಕ್ಕ ಸ್ವಂತ ಮನೆ ಇಲ್ಲದೆ ಇದ್ದವರು ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದ್ರಿ ಮನೆ ಇಲ್ಲದವರು ಸರ್ಕಾರಿ ಜಾಗದಲ್ಲಿ ಸಣ್ಣ ಸಣ್ಣ ಶೆಡ್ಡ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಗ್ರಾಮ ಪಂಚಾಯತನಲ್ಲಿ ಅಧ್ಯಕ್ಷ ಆದ ಮೇಲೆ, ಮನೆ ಇಲ್ಲದವರು ನನ್ನ ಬಳಿ ಬಂದು, ಮನೆ

ಕೋಡಿ ಎಂದು ಕೇಳುತ್ತಾ ಇದ್ದರು ಅಂದರೆ ಸರಿಯಲ್ಲ. ಸದ್ರಿ ಎಲ್ಲರೂ ಸೇರಿಕೊಂಡು ಉಪವಾಸ ಸತ್ಯಾಗ್ರಹ ಮಾಡಿ ಪಂಚಾಯತಿ ಮುಂದೆ ಪ್ರತಿಭಟನೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದ್ರಿ ಪ್ರತಿಭಟನೆಯ ನೇತೃತ್ವವನ್ನು ಆರೋಪಿ ವಹಿಸಿದ್ದರು ಎಂದರೆ ಸರಿಯಲ್ಲ. ಆಗ ಪೊಲೀಸ ಲಾಟೀ ಚಾರ್ಜ ಮಾಡಿ ಅವರನ್ನು ಓಡಿಸಿದ್ದರು ಎಂದರೆ ಸರಿಯಲ್ಲ.

19. ಪ್ರಾ.ಸಾ.2 ನನ್ನ ಗೆಳೆಯ ಮತ್ತು ನೆರೆಕೆರೆಯವರು. ಪಂಚಾಯತಿಯವರು ಆರೋಪಿ ಮತುತ ಇತರರಿಗೆ ಕೊಡಬೇಕಾದ ಸರ್ಕಾರಿ ಜಾಗವನ್ನು, ಪ್ರಾ.ಸಾ.2 ರವರಿಗೆ ಕಲ್ಲುಕೇರಿ ನಡೆಸಲು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಅದಕ್ಕೂ ಸಹ ಪ್ರತಿಭಟನೆ ನಡೆಯಿತು ಎಂದರೆ ಸರಿಯಲ್ಲ. ಈ ಕಾರಣಕ್ಕಾಗಿ ನನಗೆ ಆರೋಪಿ ಮೇಲೆ ದ್ವೇಷ ಇತ್ತು ಎಂದರೆ ಸರಿಯಲ್ಲ.

20. ನಾನು ಕಾರು ಟ್ಯಾಕ್ಸಿ ಚಲಾಯಿಸುತ್ತೇನೆ. ನನ್ನ ಕಾರನ್ನು ಪೊಲೀಸರು ಬಾಡಿಗೆಗೆ ತೆಗೆದುಕೊಂಡು ಹೋಗುತ್ತಾರೆ ಎಂದರೆ ಸರಿಯಲ್ಲ. ಪಂಚಾಯತಿಯಲ್ಲಿ ಸಮಸ್ಯೆ ಬಂದಾಗ ನಾವು ಪೊಲೀಸರ ಬಳಿ ಹೋಗುತ್ತೇವೆ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಸದ್ರಿ ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಮರದ ಹಲಗೆ ಹೊಸದಾಗಿ ಕಾಣುತ್ತದೆ ಎಂದರೆ ಸರಿಯಲ್ಲ. ಅವುಗಳನ್ನು ಆಗ ಅಷ್ಟೇ ಅಂಗಡಿಯಿಂದ ತಂದದ್ದು ಎಂದರೆ ಸರಿಯಲ್ಲ. ಸದ್ರಿ ಮು.ಮಾ.1 ರಿಂದ ಮು.ಮಾ.10 ಸ್ಥಳದಲ್ಲಿ ಪಡೆದಿಲ್ಲ ಬದಲಿಗೆ ಪೊಲೀಸ ಠಾಣೆಯಲ್ಲಿ ತಂದು ಅವುಗಳಿಗೆ ಚೀಟಿ ಅಂಟಿಸಿ ನನ್ನ ಸಹಿ ಪಡೆದಿದ್ದಾರೆ ಎಂದರೆ

ಸರಿಯಲ್ಲ. ನಾನು ಸಹಿಗಳನ್ನು ಸ್ಥಳದಲ್ಲಿ ಹಾಕಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಲಾಜಿಗೆ ಬಿದ್ದು ಸಹಿಗಳನ್ನು ಸ್ಥಳದಲ್ಲಿ ಹಾಕಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಹೊರಗೆ ಬರಬಾರದು ಆತ ಜೈಲಿನಲ್ಲಿ ಇರಬೇಕು ಸುಳ್ಳು ಪ್ರಕರಣಕ್ಕೆ ಪೂರಕ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಪ್ರಕರಣಕ್ಕೂ, ಆರೋಪಿಗೂ ಮತ್ತು ಮು.ಮಾ.1 ರಿಂದ ಮು.ಮಾ.10 ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಮತ್ತು ಯಾರನ್ನೂ ನೋಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.